KACD410009842021

**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,</u>**
**<u>ಹೊಳಲ್ಕೆರೆ.</u>**

**<u>ಉಪಸ್ಥಿತರು</u>**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 06 ನೇ ಏಪ್ರಿಲ್, 2026**

**<u>ಸಿ.ಸಿ. ಸಂಖ್ಯೆ-619/2021</u>**

ಫಿರ್ಯಾದಿ : ರಾಜ್ಯದ ಪರವಾಗಿ, ಹೊಳಲ್ಕೆರೆ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

ಆರೋಪಿತರು:

1. ಸುಂದರ್ ರಾಜ್ ಬಿನ್ ಲೇಟ್ ನೀಲಪ್ಪ,
   ವಯಸ್ಸುಃ ಸುಮಾರು 53 ವರ್ಷ,
   ಉದ್ಯೋಗಃ ಕೂಲಿ ಕೆಲಸ,
2. ಮಮತ ಕೋಂ ಸುಂದರ್ ರಾಜ್,
   ವಯಸ್ಸುಃ ಸುಮಾರು 45 ವರ್ಷ,
   ಉದ್ಯೋಗಃ ಕೂಲಿ ಕೆಲಸ,
3. ಧ್ರುವ ಬಿನ್ ಸುಂದರ್ ರಾಜ್,
   ವಯಸ್ಸುಃ ಸುಮಾರು 19 ವರ್ಷ,
   ಉದ್ಯೋಗಃ ಕೂಲಿ ಕೆಲಸ,

ಎಲ್ಲರೂ ವಾಸಃ ನೆಹರು ಕಾಲೋನಿ ಗ್ರಾಮ,
ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ.

(ಪ್ರತಿನಿಧಿಸುವವರುಃ ಶ್ರೀ ಎಂ.ಎನ್. ಚಂದ್ರಕಾಂತ, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 06.10.2020 |
| 2 | ಅಪರಾಧ ವರದಿಯಾದ ದಿನಾಂಕ | 08.10.2020 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | - |
| 4 | ಫಿರ್ಯಾದಿಯ ಹೆಸರು | ಮೀನಾಕ್ಷಮ್ಮ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 09.01.2026 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 09.01.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 448, 504, 323, 354(ಬಿ) ಮತ್ತು 506 ಸಹವಾಚಕ ಕಲಂ 34 |
| 8 | ನ್ಯಾಯಾಧೀಶರ ಅಭಿಪ್ರಾಯ | 1 ರಿಂದ 3 ನೇ ಆರೋಪಿತರು ನಿರಪರಾಧಿಗಳು |

*****

**ತೀರ್ಪು**

1 ರಿಂದ 3 ನೇ ಆರೋಪಿತರ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಹೊಳಲ್ಕೆರೆ ಪೊಲೀಸ್ ಠಾಣೆರವರು ದೋಷಾರೋಪಣಾ ಪತ್ರವನ್ನು ಸಲ್ಲಿಸಿ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 448, 504, 323, 354(ಬಿ) ಮತ್ತು 506 ಸಹವಾಚಕ ಕಲಂ 34ರ ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ದಿನಾಂಕ 06.10.2020 ರಂದು ಸಂಜೆ 04.00 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು, ನೆಹರೂ ಕಾಲೋನಿ ಗ್ರಾಮದಲ್ಲಿ ಚಾಸಾ-6 ರವರ ಮನೆಯಲ್ಲಿ, ಚಾಸಾ-1, 5 ಮತ್ತು 6 ರವರು ಇರುವಾಗ್ಗೆ, 1 ರಿಂದ 3 ನೇ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-6 ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿದ್ದು, ಚಾಸಾ-1 ರವರಿಗೆ ಉದ್ದೇಶಿಸಿ ಮನೆಯ ಬಿಡಿಸುವ ವಿಚಾರದಲ್ಲಿ, ಚಾಸಾ-1 ರವರಿಗೆ ಬೋಸೂಡಿ, ಅಲ್ಕಾಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು, 1 ನೇ ಆರೋಪಿತರು ಚಾಸಾ-1 ರವರ ತಲೆ ಕೂದಲು ಹಿಡಿದು ಎಳೆದಾಡಿ, ಕೈಯಿಂದ ಮೈ ಕೈಗೆ ಹೊಡೆದು ನೋವುಂಟು ಪಡಿಸಿದ್ದು, ಚಾಸಾ-1 ರವರ ಮೈ ಮೇಲಿನ ಸೀರೆಯನ್ನು ಹಿಡಿದು ಎಳೆದಾಡಿ, ಚಾಸಾ-1 ರವರ ಮಾನಕ್ಕೆ ಚ್ಯುತಿಯುಂಟುಪಡಿಸಿದ್ದು, ನಂತರ 1 ರಿಂದ 3 ನೇ ಆರೋಪಿತರೆಲ್ಲರೂ ಸೇರಿ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಆರೋಪಿಸಲಾಗಿದೆ.

3. 1 ರಿಂದ 3 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಆರೋಪಣಾ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು. 1 ರಿಂದ 3 ನೇ ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, 1 ರಿಂದ 3 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ 1 ರಿಂದ 3 ನೇ ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ಹೇಳಿ ವಿವರಿಸಲಾಗಿ, 1 ರಿಂದ 3 ನೇ ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. 1 ರಿಂದ 3 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತು ಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 8 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರನ್ನು ಪ್ರಾಸಾ-2 ಮತ್ತು 3 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3, 7 ಮತ್ತು 8 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ

ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 5 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ಚಾಸಾ-6 ರವರು ವಿಚಾರಣಾ ಹಂತದಲ್ಲಿ ಮೃತಪಟ್ಟಿರುವುದಾಗಿ ವರದಿ ಮಾಡಿರುತ್ತಾರೆ.

5. 1 ರಿಂದ 3 ನೇ ಆರೋಪಿತರ ವಿರುದ್ಧದ ಆರೋಪಗಳನ್ನು ರುಜುವಾತು ಪಡಿಸುವಂತಹ ಯಾವುದೇ ಮೌಖಿಕ ಹಾಗೂ ದಾಖಲೆಗಳ ಸಾಕ್ಷಾಧಾರಗಳು ಈ ಪ್ರಕರಣದಲ್ಲಿ ಕಂಡುಬರದಿದ್ದ ಕಾರಣ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ 1 ರಿಂದ 3 ನೇ ಆರೋಪಿತರ ವಿರುದ್ಧ ಅಭಿಯೋಜನೆ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸುವ ಹಂತವನ್ನು ಕೈಬಿಡಲಾಗಿದೆ.

6. 1 ರಿಂದ 3 ನೇ ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ-ವಿವಾದಗಳನ್ನು ಆಲಿಸಲಾಯಿತು. ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೆ:-

1. ದಿನಾಂಕ 06.10.2020 ರಂದು ಸಂಜೆ 04.00 ಗಂಟೆ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು, ನೆಹರೂ ಕಾಲೋನಿ ಗ್ರಾಮದಲ್ಲಿ ಚಾಸಾ-6 ರವರ ಮನೆಯಲ್ಲಿ, ಚಾಸಾ-1, 5 ಮತ್ತು 6 ರವರು ಇರುವಾಗ್ಗೆ, 1 ರಿಂದ 3 ನೇ ಆರೋಪಿತರು ಅಪರಾಧ ಮಾಡುವ ಸಮಾನ ಉದ್ದೇಶದಿಂದ ಚಾಸಾ-6 ರವರ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿರುವ ಕಾರಣ, 1 ರಿಂದ 3 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 448 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

2. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 3 ನೇ ಆರೋಪಿತರು ಚಾಸಾ-1 ರವರಿಗೆ ಉದ್ದೇಶಿಸಿ ಮನೆಯ ಬಿಡಿಸುವ ವಿಚಾರದಲ್ಲಿ, ಚಾಸಾ-1 ರವರಿಗೆ ಬೋಸೂಡಿ, ಅಲ್ಕಾಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿರುವ ಕಾರಣ, 1 ರಿಂದ 3 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾ ರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

3. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ನೇ ಆರೋಪಿತರು ಚಾಸಾ-1 ರವರ ತಲೆ ಕೂದಲು ಹಿಡಿದು ಎಳೆದಾಡಿ, ಕೈಯಿಂದ ಮೈ ಕೈಗೆ ಹೊಡೆದು ನೋವುಂಟುಮಾಡಿರುವ ಕಾರಣ, 1 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

4. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ನೇ ಆರೋಪಿತರು ಚಾಸಾ-1 ರವರ ಮೈ ಮೇಲಿನ ಸೀರೆಯನ್ನು ಹಿಡಿದು ಎಳೆದಾಡಿ, ಚಾಸಾ-1 ರವರ ಮಾನಕ್ಕೆ ಚ್ಯುತಿಯುಂಟು ಮಾಡಿರುವ ಕಾರಣ, 1 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 354(ಬಿ) ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆ ಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

5. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, 1 ರಿಂದ 3 ನೇ ಆರೋಪಿತರೆಲ್ಲರೂ ಚಾಸಾ-1 ರವರಿಗೆ ಪ್ರಾಣ ಬೆದರಿಕೆ ಹಾಕಿರುವ ಕಾರಣ, ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು

ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿ ದ್ದಾರೆಯೇ ?

6. ಹಾಗಿದ್ದರೆ ಯಾವ ಆಜ್ಞೆ ?

9. ಈ ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ, |
| ಅಂಶ-2 | : | ನಕಾರಾತ್ಮಕವಾಗಿ, |
| ಅಂಶ-3 | : | ನಕಾರಾತ್ಮಕವಾಗಿ, |
| ಅಂಶ-4 | : | ನಕಾರಾತ್ಮಕವಾಗಿ, |
| ಅಂಶ-5 | : | ನಕಾರಾತ್ಮಕವಾಗಿ, |
| ಅಂಶ-6 | : | ಅಂತಿಮ ಆದೇಶದಂತೆ. |

## ಕಾ ರ ಣ ಗ ಳು

**10. ಅಂಶ-1 ರಿಂದ 5:-** ಈ ಐದು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ಈ ಅಂಶಗಳಿಗೆ ನೀಡುವಂತಹ ಕಾರಣಗಳು ಒಂದೇ ಆಗಿರುವುದರಿಂದ, ವಿಷಯದ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಈ ಐದು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ.

11. ಈ ಮೇಲ್ಕಂಡ ಅಂಶಗಳ ಕುರಿತಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 8 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರನ್ನು ಪ್ರಾಸಾ-2 ಮತ್ತು 3 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2, 3, 7 ಮತ್ತು 8 ರವರನ್ನು ಸಾಕ್ಷ್ಯದ ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 5 ರಂತೆ

ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ-6 ರವರು ವಿಚಾರಣಾ ಹಂತದಲ್ಲಿ ಮೃತಪಟ್ಟಿರುವುದಾಗಿ ವರದಿ ಮಾಡಿರುತ್ತಾರೆ.

12. ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತನಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾನು ಯಾವುದೇ ದೂರನ್ನು ಮತ್ತು ಮರುಹೇಳಿಕೆಯನ್ನು ನೀಡಿರುವುದಿಲ್ಲವೆಂದು, ತನ್ನ ಸಮಕ್ಷಮ ಯಾವುದೆ ಮಹಜರನ್ನು ಜರುಗಿಸಿಲ್ಲವೆಂದು ಮತ್ತು ಯಾವುದೆ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿಯು ಮುಂದುವರೆದು ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿರುವ ಕಾರಣ, ಈಗ ಆರೋಪಿತ ರೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆಂದು ನುಡಿದಿರುತ್ತಾರೆ.

13. ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ಮತ್ತು 5 ರವರನ್ನು ಪ್ರಾಸಾ-2 ಮತ್ತು 3 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಚಾಸಾ-1 ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ಚಾಸಾ-1 ರವರಿಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ತಾವು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದಾಗ್ಯೂ ಕೂಡ, ಮೇಲ್ಕಂಡ ಅಂಶಗಳನ್ನು ಹೊರತುಪಡಿಸಿ ಇತರೆ ಯಾವುದೇ ಅಂಶಗಳನ್ನು ಅಭಿಯೋಜನೆಗೆ ಪೂರಕವಾಗಿ ಪಡೆದಿರುವುದಿಲ್ಲ. ಸದರಿ ಸಾಕ್ಷಿದಾರರು ಮುಂದುವರೆದು

ತಾವು ಮತ್ತು ಆರೋಪಿತರು ಸೋದರ ಸಂಬಂಧಿಗಳಾಗಿರುವ ಕಾರಣ, ಈಗ ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುತ್ತೇವೆಂದು ನುಡಿದಿರುತ್ತಾರೆ.

14. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ, ನಿಪಿ-1 ರಂತೆ ಪ್ರಾಸಾ-1 ರವರು ದಿನಾಂಕ 08.10.2020 ರಂದು ಆರೋಪಿತರು ತಮಗೆ ಅವಾಚ್ಯ ಶಬ್ದಗಳಿಂದ ಬೈದು, ಹಲ್ಲೆ ಮಾಡಿ, ಕೊಲೆ ಬೆದರಿಕೆ ಹಾಕಿರುತ್ತಾರೆಂದು ನೀಡಿದ ದೂರು ಆಗಿರುತ್ತದೆ. ನಿಪಿ-2 ರಂತೆ ದಿನಾಂಕ 08.10.2020 ರಂದು ಜರುಗಿಸಿದ ಸ್ಥಳ ಮಹಜರನ್ನು ಹಾಜರುಪಡಿಸಿರುತ್ತಾರೆ. ನಿಪಿ-3 ರಂತೆ ದಿನಾಂಕ 09.10.2020 ರಂದು ಪ್ರಾಸಾ-1 ರವರು ನೀಡಿರುವ ಮರುಹೇಳಿಕೆಯನ್ನು ಹಾಜರುಪಡಿಸಿರುತ್ತಾರೆ. ನಿಪಿ-4 ಮತ್ತು 5 ರಂತೆ ದಿನಾಂಕ 09.10.2020 ರಂದು ಪ್ರಾಸಾ-2 ಮತ್ತು 3 ರವರು ನೀಡಿರುವ ಅಲ್ಲಗಳೆದ ಹೇಳಿಕೆಗಳನ್ನು ಹಾಜರುಪಡಿಸಿರುತ್ತಾರೆ.

15. ಈ ಮೇಲ್ಕಾಣಿಸಿದ ಸಾಕ್ಷಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ರವರು ಫಿರ್ಯಾದುದಾರರಾಗಿದ್ದು, ಪ್ರಾಸಾ-2 ಮತ್ತು 3 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ತಮ್ಮ ಸಾಕ್ಷ್ಯದಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ಚಾಸಾ-1 ರವರಿಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾಸಾ-1 ರವರು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾಸಾ-2 ಮತ್ತು 3 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಈ ಅಂಶಗಳನ್ನು ಗಮನಿಸಿದಾಗ, 1 ರಿಂದ 3 ನೇ ಆರೋಪಿತರ ವಿರುದ್ಧ ಹೊರಿಸಿದ ಆರೋಪಗಳು ಕೇವಲ ಆರೋಪಗಳಾಗಿ ಉಳಿದಿದೆಯೇ ವಿನಃ ಸದರಿ ಆರೋಪಣೆಗಳನ್ನು ಸಾಬೀತುಪಡಿಸಿರುವುದಿಲ್ಲ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯು 1 ರಿಂದ 3 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆಯೆಂದು ಕಂಡುಬರುತ್ತದೆ.

16. ಪ್ರಸ್ತುತ ಈ ಪ್ರಕರಣದಲ್ಲಿ 1 ರಿಂದ 3 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 448, 504, 323, 354(ಬಿ) ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಕಂಡ ಕಲಂಗಳನ್ನು ಪರಿಶೀಲಿಸಲಾಗಿ, ಭಾರತೀಯ ದಂಡ ಸಂಹಿತೆ ಕಲಂ 448, 504, 323 ಮತ್ತು 506 ರ ಅಪರಾಧಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 320 ರ ಅಡಿಯಲ್ಲಿ ರಾಜಿಮಾಡಿಕೊಳ್ಳಬಹುದಾದ ಅಪರಾಧಗಳು ಎಂಬುದಾಗಿ ಸ್ಪಷ್ಟವಾಗಿ ಕಂಡುಬರುತ್ತದೆ. ಅಂತೆಯೆ ಪ್ರಾಸಾ-1 ರಿಂದ 3 ರವರು ತಮ್ಮ ಪಾಟೀ ಸವಾಲಿನಲ್ಲಿ, ತಾವು ಹಾಗೂ ಆರೋಪಿತರು ರಾಜಿಮಾಡಿಕೊಂಡಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಹಾಗಾಗಿ ಉಭಯ ಪಕ್ಷಗಾರರ ನಡುವಣ ಸೌಹಾರ್ದಯುತ ಜೀವನಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುವ ಕಾರಣ, ಅಭಿಯೋಜನೆ ಪರ ಸಾಕ್ಷ್ಯವನ್ನು ಅಂಗೀಕರಿಸಲಾಗುತ್ತದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬರುತ್ತದೆ.

17. ಈ ಮೇಲ್ಕಂಡಂತೆ ಪ್ರಾಸಾ-1 ರಿಂದ 3 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಮ್ಮ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆ ನಡೆದಿಲ್ಲವೆಂದು, ಆರೋಪಿತರು ತಮಗೆ ಯಾವುದೇ ತೊಂದರೆ ನೀಡಿಲ್ಲವೆಂದು, ಈ ಪ್ರಕರಣದ ಕುರಿತು ಪ್ರಾಸಾ-1 ರವರು ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ಹಾಗೂ ಪ್ರಾಸಾ-2 ಮತ್ತು 3 ರವರು ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಅಭಿಯೋಜನೆಯು 1 ರಿಂದ 3 ನೇ ಆರೋಪಿತರ ವಿರುದ್ಧ ಆಪಾದಿಸಿದಂತಹ ಆರೋಪಗಳನ್ನು ಸಂಶಯಾತೀತವಾಗಿ ಹಾಗೂ ಪೂರಕವಾದ ಸಾಕ್ಷಾಧಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಕಂಡುಬರುತ್ತದೆ. ಸದರಿ ಸಂಶಯದ ಲಾಭವನ್ನು ಮತ್ತು ಈ ಪ್ರಕರಣದ ಫಿರ್ಯಾದುದಾರರಾದ ಪ್ರಾಸಾ-1 ರವರು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2 ಮತ್ತು 3 ರವರು ಆರೋಪಿತರೊಂದಿಗೆ ರಾಜಿಮಾಡಿಕೊಂಡಿರುವುದನ್ನು ತಮ್ಮ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುವುದನ್ನು ಪರಿಗಣನೆಗೆ ತೆಗೆದುಕೊಂಡು, 1 ರಿಂದ 3 ನೇ ಆರೋಪಿತರು ಬಿಡುಗಡೆ ಹೊಂದಲು ಅರ್ಹರಿರುತ್ತಾರೆಂದು ಅಭಿಪ್ರಾಯಪಟ್ಟು, ಈ ಮೇಲ್ಕಾಣಿಸಿದ ಅಂಶ-1 ರಿಂದ 5 ನ್ನು ನಕಾರಾತ್ಮಕವೆಂದು ಉತ್ತರಿಸಿರುತ್ತೇನೆ.

**18. <u>ಅಂಶ-6:-</u>** ಈ ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ, ಈ ಕೆಳಗಿನಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಕಾರ್ಯೋನ್ಮುಖನಾಗಿ, 1 ರಿಂದ 3 ನೇ ಆರೋಪಿತರನ್ನು ಅವರ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ 448, 504, 323, 354(ಬಿ) ಮತ್ತು 506 ಸಹವಾಚಕ ಕಲಂ 34 ರ ಆರೋಪಗಳಿಗಾಗಿ ನಿರಪರಾಧಿಗಳು ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ 1 ರಿಂದ 3 ನೇ ಆರೋಪಿತರು ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು, ಈ ತೀರ್ಪು ಉದ್ಘೋಷಿಸಿದ ದಿನದಿಂದ ಆರು ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 06 ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

## ಅನುಬಂಧ

**<u>ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:</u>**

| | | |
|---|---|---|
| ಪ್ರಾ.ಸಾ-1 | : | ಮೀನಾಕ್ಷಮ್ಮ |
| ಪ್ರಾ.ಸಾ-2 | : | ಮಂಜಮ್ಮ |
| ಪ್ರಾ.ಸಾ-3 | : | ನೀಲಮ್ಮ |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-2 | : | ಸ್ಥಳ ಪಂಚನಾಮೆ |
| ನಿಪಿ-2(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-3 | : | ಪ್ರಾಸಾ-1 ರವರ ಮರು ಹೇಳಿಕೆ |
| ನಿಪಿ-4 ಮತ್ತು 5 | : | ಪ್ರಾಸಾ-2 ಮತ್ತು 3 ರವರ ಅಲ್ಲಗಳೆದ ಹೇಳಿಕೆಗಳು. |

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:**

- ಇಲ್ಲ -

**ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:**

- ಇಲ್ಲ -

(ರಘುರಾಮ ಎನ್.ಎಸ್.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.